ಬೀದರ್ ಜಿಲ್ಲಾ ಪರಿಷತ್ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು.

2174 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಪರಿಷತಗೆ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ?

ಆ) ಇದುವರೆಗೂ ಬಿಡುಗಡೆ ಮಾಡಲಾದ ಹಣ ಎಷ್ಟು? ಹಾಗೂ ಖರ್ಚು ಮಾಡಲಾಗಿರುವ ಹಣ ಎಷ್ಟು?

ಇ) ಬೀದರ್ ಜಿಲ್ಲಾ ಪರಿಷತ್ತಿನಿಂದ ಔರಾದ್ ತಾಲ್ಲೂಕಿನಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ? ಹಾಗೂ ಈ ಅಭಿವೃದ್ಧಿ ಕಾರ್ಯಗಳ ಅನುಷ್ಠಾನವು ಪ್ರಗತಿಯು ಯಾವ ಹಂತದಲ್ಲಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1995-96ನೇ ಸಾಲಿನ ಆಯವ್ಯಯದಲ್ಲಿ ಬೀದರ್ ಜಿಲ್ಲಾ ಪಂಚಾಯತಿಗೆ ಯೋಜನೆ ಅಡಿಯಲ್ಲಿ ರೂ. 3894.22 ಲಕ್ಷ ಯೋಜನೇತರ ಅಡಿಯಲ್ಲಿ ರೂ. 4409.94 ಲಕ್ಷ ನಿಗಧಿಪಡಿಸಿದೆ.

ಆ) ಬಿಡುಗಡೆ ಮಾಡಿದ ಹಣ (ಆಗಸ್ಟ್ 95ರವರೆಗೆ)

ಯೋಜನೆ	ರೂ. 1627.37 ಲಕ್ಷ
ಯೋಜನೇತರ	ರೂ. 1837.55 ಲಕ್ಷ
	ರೂ. 3464.92 ಲಕ್ಷ

ಖರ್ಚು ಮಾಡಿರುವ ಹಣ ಆಗಸ್ಟ್ 1995ರವರೆಗೆ

ಯೋಜನೆ	ರೂ. 1049.49 ಲಕ್ಷ
ಯೋಜನೇತರ	ರೂ. 1779.06 ಲಕ್ಷ
	ರೂ. 2828.55 ಲಕ್ಷ.

ಇ) ಅನುಬಂಧ - (ಅ) ನಲ್ಲಿ ವಿವರಿಸಿದೆ.

ಅನುಬಂಧ - ಅ

ಕ್ರ. ಸಂ.	ಕಾಮಗಾರಿಗಳ ಹೆಸರು	ತೆಗೆದು ಕೊಂಡ ಕಾಮಗಾರಿಗಳು	ಪೂರ್ಣ ಗೊಂಡಿರುವ ಕಾಮಗಾರಿಗಳು	ಖರ್ಚು ರೂ. ಲಕ್ಷಗಳಲ್ಲಿ
1.	ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಬೀದರ್ ರಸ್ತೆ ಮತ್ತು ಸೇತುವೆಗಳು	25	15	0.969
2.	ಕುಡಿಯುವ ನೀರು ಪೂರೈಕೆ ಯೋಜನೆ			
	ಅ) ಕೊಳವೆ ನೀರು ಪೂರೈಕೆ ಯೋಜನೆಗಳ ಪುನಃಶ್ಚೇತನ	17	13	
	ಆ) ಕಿರು ನೀರು ಪೂರೈಕೆ ಯೋಜನೆಗಳ ಪುನಃಶ್ಚೇತನ	33	26	75.127
	ಇ) ಕೊಳವೆ ಬಾವಿಗಳು	54	54	
3.	ಸಣ್ಣ ನೀರಾವರಿ ಯೋಜನೆ	4	1	-
4.	ಆರೋಗ್ಯ ಇಲಾಖೆ ಕಟ್ಟಡಗಳು	9	1	-
5.	ಶೇ. 20ರ ಜಿ.ಆರ್.ವೈ ಕಾಮಗಾರಿಗಳು	21	15	2.813
6.	ಡಿ.ಪಿ.ಎ.ಪಿ. ಸಣ್ಣ ನೀರಾವರಿ	4	1	2.184
7.	ಇ.ಎ.ಎಸ್. ಕಾಮಗಾರಿಗಳು			
	ಅ) ಶಾಲಾ ಕಟ್ಟಡಗಳು	5	3	1.445
	ಆ) ಸಣ್ಣ ನೀರಾವರಿ	19	6	17.101
	ಇ) ರಸ್ತೆ ಮತ್ತು ಸೇತುವೆಗಳು	23	20	26.123
	ಈ) ತೆರೆದ ಬಾವಿಗಳು	17	04	04.360
		231	**159**	**130.122**
2.	ಕರ್ನಾಟಕ ಭೂ ಸೇನಾ ನಿಗಮ, ಬೀದರ್			
1.	ಕಿರಿಯ ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣ	40	ಪ್ರಗತಿ ಹಂತದಲ್ಲಿ	5.584